ಬ್ರಾಹ್ಮಣರ ರಾಜಕೀಯ ಪ್ರಜ್ಞೆ ಮತ್ತು ಚುನಾವಣೆ

ಬೆಂಗಳೂರು ಮಹಾನಗರದಲ್ಲಿ ಬ್ರಾಹ್ಮಣರ ರಾಜಕೀಯ ಪ್ರಜ್ಞೆ ಜಾಗೃತಿ ಕುರಿತು ಕಳೆದವಾರ ಒಂದು ಸಮ್ಮೇಳನ ನಡೆಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಆಯೋಜಿಸಿದ್ದ ಸಮ್ಮೇಳನದಲ್ಲಿ ಮಾಜಿ ಸಚಿವರುಗಳಾದ ಹಾರನಹಳ್ಳಿ ರಾಮಸ್ವಾಮಿ, ವಿ.ಎಸ್. ಕೃಷ್ಣ ಅಯ್ಯರ್ ಮತ್ತು ಆನಂತಕುಮಾರ್ ಮೊದಲಾದ ಘಟಾನುಘಟಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರೆಂದೂ ವರದಿಯಾಗಿದೆ. ಅದಿಂದ ಸಮ್ಮೇಳನ ಏನು ಸಾಧಿಸಿತು ಎಂಬುದು ಮಾತ್ರ ತಿಳಿಯಲಿಲ್ಲ.

ಭಾರತದ ಪ್ರಜಾಪ್ರಭುತ್ವವು ಜಾತ್ಯತೀತ ಮತ್ತು ಧರ್ಮನಿರಪೇಕ್ಷವಾದದ್ದು. ಅದರ ಅರ್ಥ ಜಾತಿ ಮತ್ತು ಧರ್ಮಗಳ ನಿರ್ಮೂಲನೆ ಎಂದೇನೂ ಅಲ್ಲ. ತಂತಮ್ಮ ಧರ್ಮಗಳನ್ನು ಮುಂದುವರಿಸಿಕೊಂಡು ಹೋಗಲು ಸಂವಿಧಾನದಲ್ಲೇ ಅವಕಾಶ ಇದೆ. ಆದರಿಂದಾಗಿಯೇ ತಂತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳಲು, ಉಳಿಸಿಕೊಳ್ಳಲು ಮತ್ತು ಬೆಳೆಸಿಕೊಳ್ಳಲು ಪ್ರತಿಯೊಂದು ಧರ್ಮದವರು, ಕುಲದವರು, ಜಾತಿ-ಮತದವರು ಡಾಣಾ-ದಂಗುರವಾಗಿ ತಮಗೆ ಅಧಿಕಾರದಲ್ಲಿ ಪ್ರಾತಿನಿಧ್ಯ ಮತ್ತು ರಾಜಕೀಯ ಪ್ರಾತಿನಿಧ್ಯ ದೊರೆಯಬೇಕೆಂದು ಹೇಳಿಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಬ್ರಾಹ್ಮಣರು ರಾಜಕೀಯ ಪ್ರಜ್ಞೆಯ ಜಾಗೃತಿಗಾಗಿ ತಡಕಾಡುತ್ತಿರುವುದು ವಿಪರ್ಯಾಸ! ಬುದ್ಧಿಜೀವಿಗಳು, ಪ್ರಜ್ಞಾವಂತರು, ಮುಂದುವರಿದವರು ಎಂದೆಲ್ಲ ಹೆಗಲೆಣಿಪಟ್ಟಿಯನ್ನು ಬಿಡಿಸಿಕೊಂಡ ಬ್ರಾಹ್ಮಣ ಸಮಾಜದವರು ಅಧಿಕಾರ ಹಂಚಿಕೆಯ ಸಂದರ್ಭದಲ್ಲಿ ರಾಜಕೀಯ ಪ್ರಾತಿನಿಧ್ಯ ದೊರೆಯಬೇಕೆಂದು ಹೇಳುವ ಸಂದರ್ಭದಲ್ಲಿ ಎಂದೇಕೆ ಹಾಕುತ್ತಾರೆ. ಸ್ವಪ್ರತಿಭೆ-ಸಾಮರ್ಥ್ಯಗಳಲ್ಲಾಗಲೀ ತಾನು ಬ್ರಾಹ್ಮಣ ಎಂದು ಹೇಳಿಕೊಳ್ಳಲೂ ಹಿಂಜರಿಯುತ್ತಾನೆ. ಒಂದು ರೀತಿಯ ಕೀಳರಿಮೆಯಲ್ಲಿ ತೊಳಲಾಡುತ್ತಿದ್ದಾನೆ. ಯಾಕೆ? ಯಾಕೆ ಹೀಗಾಗುತ್ತಿದೆ?

ಗಮನಿಸಬೇಕು

ಬ್ರಾಹ್ಮಣರು=ವಿಪ್ರರು" ಎಂದುಗೂಡುವುದಿಲ್ಲ. ಬ್ರಹ್ಮನ್ನಾಗಿ ಮುಂದೆ ಬರುವುದಿಲ್ಲ ಎಂಬುದು ಬಹು ಮುಖ್ಯವಾದ ಆರೋಪ ಬ್ರಾಹ್ಮಣರಿಗಿದೆ. ಅವನ್ನು ಬೆಳೆಸುವವರು ಮತ್ತೆ ಯಾರೂ ಅಲ್ಲ ಬ್ರಾಹ್ಮಣೇತರರೇ ಎಂಬುದನ್ನು ಗಮನಿಸಬೇಕು. ಹಾಗೆ ಹೇಳಿ-ಹೇಳಿ ಈಗ ಅದನ್ನು ಬ್ರಾಹ್ಮಣರೂ ಹೇಳಿಕತ್ತಿದ್ದಾರೆ. ಬ್ರಾಹ್ಮಣರಲ್ಲಿ ಒಳಪಂಗಡಗಳು, ಮತಭೇದಗಳು, ಹೆಚ್ಚು, ಒಳಪಂಗಡಗಳು, ಮತಭೇದಗಳು ಇವೆ. ಲಿಂಗಾಯತ, ಒಕ್ಕಲಿಗ, ಕುರುಬ, ಹಿಂದುಳಿದ ಜನಾಂಗಗಳಲ್ಲೂ ಇಸೇನ ಒಳಭೇದಗಳೇವ ಎಂಬುದೇನೂ ಹೊಸದಲ್ಲ. ವಿಷ್ಣುವಿನ ಆ ಭೇದಗಳು ಬೀದಿಗೆ ಬಂದದ್ದೂ ಉಂಟು. ಆದರೆ ಬ್ರಾಹ್ಮಣ-ಬ್ರಾಹ್ಮಣೇತರರ ಮಧ್ಯದ ಸ್ಪರ್ಧಾಸಂದರ್ಭದಲ್ಲಿ, ರಾಜಕೀಯ ಪ್ರಾತಿನಿಧ್ಯದ ಸಂದರ್ಭದಲ್ಲಿ ವಿಲೇಷವಾಗಿ ಚುನಾವಣೆಗಳಲ್ಲಿ ಭೇದಗಳು ಮಾಯವಾಗಿ ಲಿಂಗಾಯತ, ಒಕ್ಕಲಿಗ, ಕುರುಬ ಎಂದಷ್ಟೇ ಉಳಿದುಬಿಡುತ್ತದೆ. ಆ ಮುಖಾಂತರ ಪ್ರಾತಿನಿಧ್ಯಕ್ಕೆ ಪ್ರಬಲಿಸುತ್ತಿರುವುದನ್ನು ಬ್ರಾಹ್ಮಣರು ಗಮನಿಸಬೇಕು.

ಗ್ರಾಮಗಳಿಂದ ವಲಸೆ

ಸ್ವಾತಂತ್ರ್ಯಾನಂತರದ ಕರ್ನಾಟಕ ರಾಜ್ಯದಲ್ಲಿ ಪ್ರಬಲೋಚಿತ ವರ್ಗವೆಂದು ಆನೇಕ ರೋಚಕಗಳಿಗಳಿಗೆ ಒಳಗಾದ ಬ್ರಾಹ್ಮಣ ಸಮುದಾಯ ಈ ಅವಧಿಯಲ್ಲಿ ಗ್ರಾಮ-ಹಳ್ಳಿಗಳನ್ನು ತ್ಯಜಿಸಿ ಪ್ರತಿಶತ 80 ರಿಂದ 90 ರಷ್ಟು ಬ್ರಾಹ್ಮಣರು ನಗರಪ್ರದೇಶಗಳಿಗೆ ವಲಸೆ ಬಂದಿದ್ದಾರೆ. ಮೀಸಲಾತಿಗಳ ಗೊಜಿಲಿಲ್ಲದೆ ತಂತಮ್ಮ ಕಾಲಮೇಲೆ ನಿಂತಿದ್ದಾರೆ. ಪುರೋಹಿತ ವರ್ಗವೆಂದು ಕರೆಯಿಸಿಕೊಳ್ಳುವ ಬ್ರಾಹ್ಮಣರು ಒಂದು ಕಾಲದಲ್ಲಿ ಬ್ರಾಹ್ಮಣ ಎಂದರೆ ಬಡ-ಬ್ರಾಹ್ಮಣ ಎಂಬ ರೂಢಿನಾಮವಾಗತ್ತು. ಅದು ಈಗ ಸಾಕಷ್ಟು ಬದಲಾವಣೆ ಆಗಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಉಳುವವನೇ ಹೊಲದ ಒಡೆಯ, ಇನಾಮು ರದ್ದತಿ ಮೊದಲಾದ ಕಾರಣಗಳಿಂದಾಗಿ ಬ್ರಾಹ್ಮಣರು ಇಂದು ಗ್ರಾಮ-ಹಳ್ಳಿಗಳಲ್ಲಿ ಕೈಬೆರಳ ಮೇಲೆ ಎಣಿಸುವಷ್ಟು ಸಂಖ್ಯೆಯಲ್ಲಿದ್ದಾರೆ. ಹತ್ತು ಹಳ್ಳಿಗಳ ಗುಂಪಿನಲ್ಲಿ ಒಂಭತ್ತು ಹಳ್ಳಿಗಳಲ್ಲಿ ಬ್ರಾಹ್ಮಣರ ಮನೆಗಳೇ ಇಲ್ಲವೆಂಬಷ್ಟರ ಮಟ್ಟಿಗೆ ಬಂದಿದೆ. ಹೀಗಾಗಿ ಬ್ರಾಹ್ಮಣರ ಮಕ್ಕಳು ಇಂದು ನವಿ. ಹಳ್ಳಿಕೊಳ್ಳಗಳ ದೇಷಯ ಮೇಲಿಲ್ಲ, ಅದು ನಗರದಲ್ಲಿದೆ. ಬ್ರಾಹ್ಮಣ ಮಗನಾಸ್ಪತಿಗೆ ಇದರ ಅರಿವಿರಲೂ ಸಾಕು. ಇವರ ಶ್ರಯೋಜನವನ್ನು ಪಡೆಯಲು ಮುಂದಾಗಿಲ್ಲ, ಮೂಲ ಪ್ರಾಣಹೋದಂಗಿಗೆ ಬಿಳಿಯವ ಪ್ರಯತ್ನವನ್ನು ಮಾಘನಿದ್ದುದು ಧುರ್ದೈವ.

ಬೆಂಗಳೂರಿನ ಬಸವನಗುಡಿ, ಮಲ್ಲೇಶ್ವರಂಲ್ಲಿ ಬ್ರಾಹ್ಮಣರ ಅಧಿಕ ಮತಗಳು ಇವೆ ಎಂದು ಅಲ್ಲಿ ಬ್ರಾಹ್ಮಣ ಅಭ್ಯರ್ಥಿಯನ್ನು ನಿಲ್ಲಿಸುವ ಪ್ರಯತ್ನವನ್ನು ಪಲವಾರು ಪಕ್ಷಗಳು ಮಾಡಿವೆ. ಯಶಸ್ವಿಯೂ ಆಗಿದ್ದಾರೆ. ಆದರೆ ಒಂದು ಅಂಶಾಜಿನಂತೆ, ಬ್ರಾಹ್ಮಣ ಮಹಾಸಭೆಯು ಶ್ರಯಸ್ಕರಿಸಿದ್ದೇ ಆದರೆ ಕರ್ನಾಟಕ ರಾಜ್ಯದಲ್ಲಿ ಕನಿಷ್ಠ ಪಕ್ಷ ಇಂಥ 40 ವಿಧಾನಸಭಾ ಮತಕ್ಷೇತ್ರಗಳನ್ನು ಗುರುತಿಸಬಹುದು. ಆಲ್ಲಿ ತನ್ನ ಬ್ರಾಹ್ಮಣ ಉಮೇದುವಾರನನ್ನು ನಿಲ್ಲಿಸಬಹುದು. ಇದರಲ್ಲಿ ಹೊಸದೇನೂ ಇಲ್ಲ. ಬಹುಜನ ಸಮಾಜ, ಒಂದೂ ಮನಾಸ್ಪಾ ಇತ್ಯಾದಿ ಪಕ್ಷಗಳಿದ್ದಂತೆ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪಕ್ಷ ಬಂದರೆ ಆದರಲ್ಲಿ ಹಾನಿ ಏನೂ ಇಲ್ಲ. ಎಲ್ಲ ಜಾತಿ-ಮತ-ಕುಲಧರ್ಮಗಳ ಬಾಂಧವರಂತೆ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಮೊದಲ ಸಂಂದರ್ಭದಲ್ಲೇ ಕನಿಷ್ಠ ಐದು-ಹತ್ತು ಸ್ಥಾನಗಳನ್ನಂತೂ ಪಡೆಯಬಹುದು. ಈ ಕಲ್ಪನೆ, ಅಂಕಿ-ಸಂಖ್ಯೆಗಳ ಅಂದಾಜು ಇದ್ದರೂ ಕೂಡ ಬ್ರಾಹ್ಮಣರು [illegible] ಎಂದಾಗಿ ಇಂದು ಯಾವ ರಾಷ್ಟ್ರೀಯ ಪಕ್ಷಗಳೂ ಬ್ರಾಹ್ಮಣರ ಮತಕ್ಕೆನ್ನು ಬಿಕ್ಕೆ ತೆಗೆದುಕೊಳ್ಳುವುದಿಲ್ಲ. ಮೊದಲು ಬದನ್ನು ಹೋಗಲಾಡಿಸುವ ದಿಶೆಯಲ್ಲಿ ಬ್ರಾಹ್ಮಣ ಸಮಾಜವು ಪ್ರಯತ್ನಿಸಬೇಕಾಗಿದೆ. ಅದೂ ಒಂದು ಶಕ್ತಿಯಾಗಿ ಹೊರಹೊಮ್ಮಬೇಕಾಗಿದೆ. ಒಬ್ಬನೇ ಒಬ್ಬ ಸ್ವತಂತ್ರ ಅಭ್ಯರ್ಥಿ ಆರಿಸಿ ಬಂದಾಗ ಕೂಡ ಹಲವಾರು ಸಂದರ್ಭಗಳಲ್ಲಿ ಆತ ಬಹು ಮುಖ್ಯವಾಗಬಲ್ಲಂತಾಗಿ ಎಂಬುದು ಗೊತ್ತಿದ್ದ ವಿಷಯವೇ ಆಗಿದೆ. ಅಂಥದ್ದರಲ್ಲಿ ಐದು-ಹತ್ತು ಜನ ಬ್ರಾಹ್ಮಣರು ಅಯ್ಕೆಯಾಗಿ ಒಂದು ಗುಂಪಾದರೆ ಅದರ ಬೆಲೆ ವಿಷ್ಟೆಂಬುದನ್ನು ಹೇಳಿಕೊಡಬೇಕಾಗಿಲ್ಲ.

ಉದಾಹರಣೆಗಾಗಿ ಬಿಜಾಪುರ ನಗರ ವಿಧಾನ ಸಭಾ ಮತಕ್ಷೇತ್ರವನ್ನೆ ಅಲ್ಪಸಂಖ್ಯಾತ ಮುಸ್ಲಿಂ ಮತಗಳು ಅಧಿಕ ಎಂದು ಎಲ್ಲರೂ ಭಾವಿಸಿದ್ದಾರೆ ಮತ್ತು ಅದರಿಂದಾಗಿ ಬಲಿಷ್ಠ ಮುಸ್ಲಿಂ ಅಭ್ಯರ್ಥಿಯನ್ನು ಮುಸ್ಲಿಮೇತರರು ಆರಿಸಿ ಬಂದೇ ಇಲ್ಲ ಎಂದೇನೂ ಅಲ್ಲ. ಆದರೆ ಬಹಳ ಸಲ ಮುಸ್ಲಿಂ ಅಭ್ಯರ್ಥಿಯೇ ಇಲ್ಲಿ ಶಾಸನಸಾಗಿದ್ದಾರೆ. ಮಾತ್ರವಲ್ಲದೆ ಬಿಜಾಪುರದಲ್ಲಿ ಬ್ರಾಹ್ಮಣರ ಮತಗಳು 40 ಸಾವಿರಕ್ಕಿಂತ ಅಧಿಕವಾಗಿವೆ. ಮುಸ್ಲಿಂರ ಮತಗಳು ಇದಕ್ಕಿಂತ 3-4 ಸಾವಿರ ಕಡಿಮೆ ಇವೆ. ಆನಂತರದಲ್ಲಿ ಲಿಂಗಾಯತರು, ಅವರುಗಳಲ್ಲಿಯೇ ಪಂಚಮಸಾಲಿ, ಗಾಣಿಗೇರ, ಬಣಜಿಗ ಮತಗಳವೆ. ಇದನ್ನು ಯಾರೂ ಲೆಕ್ಕಿಸುವುದಿಲ್ಲ ಅದರಂತೆಯೇ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ರಾಯಚೂರು, ಗುಲ್ಬರ್ಗ, ಬಳ್ಳಾರಿ, ಶಿವಮೊಗ್ಗ, ಹಾಸನ, ತುಮಕೂರು, ದಾವಣಗೆರೆ, ಸಾಗಿಲಕೋಟೆಗಳಲ್ಲೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿ ಇದೆ.

ಮುಖ್ಯ ಮಾಡಿಯಾರು

ಬೆಂಗಳೂರು-ಮೈಸೂರುಗಳಲ್ಲಂತೂ ಬ್ರಾಹ್ಮಣ ಮತಗಳು ಅಧಿಕವೆಂಬುದು (ತಿಲವು ಕ್ಷೇತ್ರಗಳಲ್ಲಿ) ಗೊತ್ತಿದ್ದ ವಿಷಯವೇ ಆಗಿದೆ. ಈ ಕ್ಷೇತ್ರಗಳಲ್ಲಿ ಪ್ರತಿಶತ ಸತ್ತು-ಹದಿನೈದರಷ್ಟು ಬ್ರಾಹ್ಮಣೇತರ ಮತಗಳನ್ನು ಗಣಸಬಲ್ಲ ಬ್ರಾಹ್ಮಣ ಅಭ್ಯರ್ಥಿಗೆ ಬ್ರಾಹ್ಮಣರ ಸಂಪೂರ್ಣ ಬೆಂಬಲ ದೊರೆತರೆ, ಮುಖ್ಯವಾಗಿ ಮತಗಟ್ಟೆಗಳಿಗೆ ಒಂದು ಮತ ಚಲಾಯಿಸಿದರೆ ಸರಾಯಾಸವಾಗಿ ಆರಿಸಿ ಬರಬಹುದು.

ಮೇಲೆ ಕಾಣಿಸಿದ ನಗರ ಕ್ಷೇತ್ರಗಳಿಂದ ಸುಮಾರು 20 ಅಭ್ಯರ್ಥಿಗಳನ್ನು ಗುರುತಿಸಬಹುದಾದರೆ, ಏರಡನೆಯ ಹಂತದವಾಗಿ ಮತ್ತೆ 20 ಜನರನ್ನು ಈ ಕೆಳಗಿನ ಜಿಲ್ಲೆ-ತಾಲ್ಲೂಕು, ಹೋಬಳಿ ಪಟ್ಟಣಗಳಲ್ಲಿ ಗುರುತಿಸಬಹುದು. ಗೋಕಾಕ, ಗದಗ, ಹಾವೇರಿ, ಜಮಖಂಡಿ, ಮಧುಗಿರಿ, ಹೊಸಪೇಟೆ, ಹರಿಹರ, ರಾಣೆಬೆನ್ನೂರು, ಶೃಂಗೇರಿ, ಉಡುಪಿ, ಬೈಲೂರು-ಹಳೇಬೀಡು, ಉಡುಪಿ-ಮಂಗಳೂರು, ಕುಂದಾಪುರ-ಸಾಗರ ಮೊದಲಾದ ಮತಕ್ಷೇತ್ರಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಬ್ರಾಹ್ಮಣರ ಮತಗಳಿವೆ. ಈ ಎಲ್ಲ 40-50 ಬ್ರಾಹ್ಮಣ ಅಭ್ಯರ್ಥಿಗಳು ಇತರರ ಸಹಕಾರದಿಂದ ಆಯ್ಕೆಯಾಗಿ ಬಂದೇ ಬರುತ್ತಾರೆ ಎಂದಲ್ಲ. ಪ್ರಯತ್ನಿಸಿದರೆ ಹತ್ತು ವರ್ಷಗಳಲ್ಲಿ ಬ್ರಾಹ್ಮಣ ಸಮುದಾಯವು ಒಂದು ಶಕ್ತಿಯಾಗಿ ಹೊರಹೊಮ್ಮುವ ಸಾಧ್ಯತೆವಿದೆ. ಇಂದು ಹೇಳಿಕೊಳ್ಳುವ ಕುಬುಳರ, ಹಿಂದುಳಿದವರ, ಅಲ್ಪಸಂಖ್ಯಾತರ, ಪಂಚಮಸಾಲಿ, ಒಕ್ಕಲಿಗರ ಮುಖಂಡರೆಂದು ಗುರುತಿಸಿಕೊಳ್ಳುವ ಜನ ಕೇವಲ ಅವರ ಮತಗಳಿಂದಲೇ ಆಯ್ಕೆಯಾಗಿ ಬರುವುದಿಲ್ಲ ಎಂಬುದನ್ನು ಗಮನಿಸಬೇಕು. ಆವರುಗಳು ಆಯಾ ಕ್ಷೇತ್ರಗಳಲ್ಲಿಯ ಗಣನೀಯ ಪ್ರಮಾಣದ ನಿರ್ದಿಷ್ಟ ಜನರ [illegible] ಗುರುತಿಸಿಕೊಳ್ಳುವಂತಾಗಿ, ಆಯಾ ಪಕ್ಷಗಳು ಬ್ರಾಹ್ಮಣರತ್ತಲೂ ಮುಖ ಮಾಡುವಂತಾಗಿ.

ಬ್ರಾಹ್ಮಣನೆಂಬ ಒಂದೇ ಒಂದು ಕಾರಣದಿಂದ ಎಂ.ಬಿ. ಪ್ರಕಾಶ ಎಂಬವರು ಸೇನಾ ಜೀವನದಲ್ಲಿದ್ದರೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಪದವಿಗೆ ವಂಚಿತರಾಗಬೇಕಾಯಿತು. ಮಂಬರುವ ಚುನಾವಣೆಯ ದೃಷ್ಟಿಯಿಂದ ಬಿ.ಎಸ್. ಪಾಟೀಲರು ಮುಖ್ಯ ಕಾರ್ಯದರ್ಶಿಯಾದರು. ಅಂದುಕೊಂಡಂತೆ ನಿವೃತ್ತಿಯ ಮರುದಿನ ಕಾಂಗ್ರೆಸ್ ಸೇರಿದರು. ಅಧಿಕಾರದಲ್ಲಿದ್ದಲ್ಲಿ ಸಹಜ. ಆದರೆ ಎಂ.ಬಿ. ಪ್ರಕಾಶರಿಗೂ ಹಿಂದೆ ಒಂದು ಬಲವಿದೆ. ಆದು ನಾಳೆ ನಮಗೆ ಕೈಕೊಟ್ಟಿತು ಎಂಬ ಬೆದರಿಕೆ ಇದ್ದರೆ ಯಾವ ಸರ್ಕಾರವೂ ರಾಗಿ ಸರ್ಕಾರ್ಯಸುತ್ತಿರಲಿಲ್ಲ. ಆ ಬಲವನ್ನು ಈಗ ಸೃಷ್ಟಿಸಿಕೊಳ್ಳಬೇಕಾಗಿದೆ.

ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ
ನಂ. 633, ಶರ್ಪಿನಗರ, ಬಿಜಾಪುರ.

ಗಾಯಕ್ವಾಡ್ ಬಂಧನ

ಕಾಲ್ಗುಣ ಪುಟುಂಬ

ಬ್ರಾಹ್ಮಣರೆಂದರೆ ಬಿಜೆಪಿ ಎಂಬುದು ಇನ್ನೊಂದು ರುದ್ಧ ಸುಳ್ಳು ಆರೋಪ. ಪ್ರಾರಂಭದಲ್ಲಿ ಆವರು ಕಟ್ಟಾ ಕಾಂಗ್ರೆಸ್ಸಿಗರು ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿದೆ. ಆಮೇಲೆ ಆವರು ಎಲ್ಲ ಪಕ್ಷಗಳಲ್ಲೂ ಗುರುತಿಸಿಕೊಂಡಿದ್ದಾರೆ. ಬ್ರಾಹ್ಮಣರು ಒಟ್ಟಿಗಾಗುವುದಿಲ್ಲ ಎಂದು ಹೇಳುವಂತೆ ಆವರು ಬಿಜೆಪಿ ಎಂದು ನಿರಾಕಾರಣ ವದಂತಿಗಳನ್ನು ಹರಡಿದರು. ಕರ್ನಾಟಕದ ಬಿಜೆಪಿಯಲ್ಲಿ ಬ್ರಾಹ್ಮಣರಿಗೆ ಎಷ್ಟು ಮರ್ಯಾದೆ ಇದೆ ಎಂಬುದನ್ನು ರಾಜ್ಯದ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಆನಂತಕುಮಾರ್ ಆವರ ಕಡೆಗೆ ಬೆರಳು ತೋರಿಸಬಹುದು. ಹಾಗೆ ತಂತಮ್ಮ ಸ್ವ-ಸಾಮರ್ಥ್ಯ, ಪ್ರತಿಭೆ ಅಥವಾ ಇನ್ನಾವ ಕಾರಣಗಳಿಂದಲೋ ಎಲ್ಲ ವಿಷಯಗಳಲ್ಲೂ ಬ್ರಾಹ್ಮಣರು ಆಗಾಗ ಮೇಲೆ ಬಂದಿದ್ದಾರೆ. ಪಲವಾರು ಸಲ ಅಧಿಕಾರದ ಚುಕ್ಕಾಣಿಯನ್ನು ಹಿಡಿದುಕೊಂಡಿದ್ದಾರೆ. ಈಗಲೂ ಹಿಡಿದಿದ್ದಾರೆ. ಮುಂದೆ ಕೂಡ ಹಿಡಿಯಬಹುದು. ಆದರಿಂದಾಗಿ ಬ್ರಾಹ್ಮಣರಿಗೆ ಒಂದು ಬಗೆಯ ಶಕ್ತಿ ಬಂದಿದೆ ಎಂದು ಹೇಳಲಾಗದು. ಯಾಕೆಂದರೆ ಆವರು ಬ್ರಾಹ್ಮಣರಿಂದಾಗಿ ಮುಂದೆ ಬಂದವರಲ್ಲ. ಸರ್ವಶ್ರೀ ಹಾರನಹಳ್ಳಿ ರಾಮಸ್ವಾಮಿ, ವಿ.ಎಸ್. ಕೃಷ್ಣ ಅಯ್ಯರ್, ಆರ್.ಎ. ದೇಶಪಾಂಡೆ, ಆನಂತ ಕುಮಾರ್, ದಿವಂಗತ ಟಿ.ಆರ್. ಶಾಮಣ್ಣ, ರಾಮಕೃಷ್ಣ ಹೆಗಡೆ, ಗುಂಡೂರಾವ್ ಮೊದಲಾದವರು ಬ್ರಾಹ್ಮಣರು ನಿಜ. ಆವರುಗಳು ತಂತಮ್ಮ ಸ್ವಪ್ರತಿಭೆ ಸಾಮರ್ಥ್ಯಗಳಿಂದ ಮುಂದೆ ಬಂದವರು. ಇಲ್ಲಿ ಬೇಕಾದದ್ದು ಪ್ರಜಾಪ್ರಭುತ್ವದಲ್ಲಿ ಬ್ರಾಹ್ಮಣ ಸಮುದಾಯದ ಆಸ್ತಿತ್ವ, ಬಲ. ಅದು ಬರಬೇಕಾದರೆ ಇಡೀ ಬ್ರಾಹ್ಮಣ ಸಮುದಾಯವು ಪ್ರಜಾಪ್ರಭುತ್ವದ ಪ್ರವಾಹದಲ್ಲಿ ಒಂದಾಗಿ ಈಜಬೇಕು. ಆಗ ಆದಕ್ಕೊಂದು ಶಕ್ತಿ ಬರುತ್ತದೆ. ಆ ಪ್ರಯತ್ನ ನಡೆಯಲಿ. ಆದಕ್ಕೆ ಬ್ರಾಹ್ಮಣರ ಮುಖಂಡರುಗಳು ದನಿಗೂಡಿಸಲಿ.